# ನಿಸ್ಸೊಡನೆ

# ಇರುಳು ಕಂಡ ಬಾವಿ ಮತ್ತು ಡಿಜಿಟಲ್ ಜಗತ್ತು

> ವಂಚನೆಯ ಸಾಧ್ಯತೆಗಳ ಅರಿವಿದ್ದೂ ಹಳ್ಳಕ್ಕೆ ಬೀಳುವ ಕೆಲವು ಪ್ರಕರಣಗಳಲ್ಲಿ ಅರಿವಿನ ಕೊರತೆಯಷ್ಟೇ ಇರುವುದಿಲ್ಲ; ಸುಲಭವಾಗಿ ದೊರೆಯಬಹುದಾದ ಲಾಭವನ್ನು ತಮ್ಮದಾಗಿಸಿಕೊಳ್ಳುವ ಆಸೆಬುರುಕತನದ ಪಾಲೂ ಇರುತ್ತದೆ. ಇರುಳು ಕಂಡ ಡಿಜಿಟಲ್ ಬಾವಿಗೆ ಹಗಲಿನಲ್ಲಿ ಬೀಳುವವರ ಸಂಖ್ಯೆ ಕಡಿಮೆಯೇನಿಲ್ಲ.

‘ಇಂಗ್ಲಿಷ್ ವಿಶ್ವದ ಅತಿ ದೊಡ್ಡ ಸುಳ್ಳಾಡುವ ಭಾಷೆ’ ಎನ್ನುವುದು ಯು.ಆರ್. ಅನಂತಮೂರ್ತಿ ಅವರ ಮಾತು. ಆ ಮಾತನ್ನು, ವರ್ತಮಾನದಲ್ಲಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಹೇಳಬಹುದು. ಯುವ ತಲೆಮಾರಿನ ಅಚ್ಚುಮೆಚ್ಚಿನ ಭಾಷೆಯಾಗಿರುವ ತಂತ್ರಜ್ಞಾನದ ಅಪಬಳಕೆಯ ಮುಖವನ್ನು ನೋಡಿದರೆ, ಅದು ಸುಳ್ಳಾಡುವ ಭಾಷೆಯೂ ಹೌದು, ಸುಳ್ಳರ ಭಾಷೆಯೂ ಹೌದೆನ್ನಿಸುತ್ತದೆ.

ಇತ್ತೀಚಿನ ಕೆಲವು ಸುದ್ದಿಗಳನ್ನು ಗಮನಿಸಿ. ತಿರುಚಿದ ವಿಡಿಯೊ ಬಳಸಿಕೊಂಡು ಸಚಿವರೊಬ್ಬರ ಪುತ್ರನನ್ನು ಬ್ಲ್ಯಾಕ್‌ಮೇಲ್ ಮಾಡಿದ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರಿತು. ಮತ್ತೊಂದು ಪ್ರಕರಣದಲ್ಲಿ, ಸಾಮಾಜಿಕ ಮಾಧ್ಯಮಗಳ ಮೂಲಕ ಯುವತಿಯರನ್ನು ಪರಿಚಯಿಸಿಕೊಂಡು ವಂಚಿಸುತ್ತಿದ್ದ ಯುವಕನ ಬಂಧನವಾಯಿತು. ಯುವತಿಯರ ಹೆಸರಿನಲ್ಲಿ ಖಾತೆಗಳನ್ನು ತೆರೆದು, ಮಾಡೆಲಿಂಗ್‌ನಲ್ಲಿ ಅವಕಾಶ ದೊರಕಿಸಿಕೊಡುವ ಆಸೆ ತೋರಿಸಿ ವಂಚಿಸಿದ ಆರೋಪ ಬಂಧನಕ್ಕೊಳಗಾದ ಯುವಕನ ಮೇಲಿದೆ. ಹುಡುಗಿಯರಿಂದ ಅರೆನಗ್ನ ಫೋಟೊ, ವಿಡಿಯೊಗಳನ್ನು ತರಿಸಿಕೊಂಡು ನಂತರ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ, ಹಣಕ್ಕಾಗಿ ಪೀಡಿಸುತ್ತಿದ್ದ ಆರೋಪಗಳು ಬಂಧಿತನ ಮೇಲಿವೆ. ಮತ್ತೊಂದು ಪ್ರಕರಣದಲ್ಲಿ ಬಿಟ್ ಕಾಯಿನ್ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ವಂಚನೆ ನಡೆದಿದೆ. ವೈವಾಹಿಕ ವೆಬ್‌ಸೈಟ್‌ಗಳಲ್ಲಿ ಹೆಸರು ನೋಂದಾಯಿಸಿ ಯುವತಿಯರನ್ನು ವಂಚಿಸಿದ ಪುರುಷೋತ್ತಮನ ಪ್ರಸಂಗವೂ ಬೆಳಕಿಗೆ ಬಂದಿದೆ.

ಸೈಬರ್ ವಂಚನೆಯ ಒಂದಲ್ಲಾ ಒಂದು ಪ್ರಕರಣ ಪ್ರತಿ ದಿನ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಇದರ ಜೊತೆಗೆ ವಂಚನೆಗೊಳಗಾಗುವವರ ಸಂಖ್ಯೆಯೂ ಹೆಚ್ಚುತ್ತಿದೆ. ವಾಟ್ಸಾಪ್ ಕಾಲ್ ಮೂಲಕ ಚಪಲ ಚೆನ್ನಿಗರಾಯರನ್ನು ಪೆಂಗು ಬೀಳಿಸುವುದು, ಬೆತ್ತಲಾಗಿಸಿ ಆಟ ಕಟ್ಟುವುದು ಸಾಮಾನ್ಯವಾಗುತ್ತಿದೆ. ಅಪರಿಚಿತರ ಮಾತು ಮತ್ತು ನೋಟಕ್ಕೆ ಕುರುಡಾದರೆ ಅಪಾಯ ಕಟ್ಟಿಟ್ಟ ಬುತ್ತಿ ಎನ್ನುವುದು ತಿಳಿದಿದ್ದರೂ ಖೆಡ್ಡಾಕ್ಕೆ ಬೀಳುತ್ತಿರುವವರ ಸಂಖ್ಯೆಯೇನೂ ಕಡಿಮೆಯಾಗಿಲ್ಲ.

ಯಾವುದೋ ಮೂಲೆಯಲ್ಲಿ ಕುಳಿತ ವಂಚಕರು ಆಮಿಷದ ಗಾಳ ಎಸೆದು ಮಿಕಗಳಿಗಾಗಿ ಕಾಯುತ್ತಾರೆ. ಹಣಕಾಸಿಗೆ ಸಂಬಂಧಿಸಿದಂತೆ ಇಂಥ ವಂಚನೆಗಳು ನಡೆಯುತ್ತಿರುವುದು ಹೆಚ್ಚು. ಸಿಮ್ ಡಿ ಆ್ಯಕ್ಟಿವೇಟ್ ಪ್ರಕ್ರಿಯೆ, ಖಾತೆಗೆ ಹಣ ವರ್ಗಾವಣೆ, ಉಚಿತ ಉಡುಗೊರೆ–ಲಾಟರಿ, ಬ್ಯಾಂಕ್ ಅಧಿಕಾರಿಗಳ ವಿಚಾರಣೆ – ಹೀಗೆ ವಂಚನೆಗೆ ಹಲವು ಮುಖಗಳು. ವಂಚಕರು ಎಷ್ಟು ಜಾಣರಾಗಿರುತ್ತಾರೆಂದರೆ, ಮಾಜಿ ಹಾಗೂ ಹಾಲಿ ಪೊಲೀಸ್ ಅಧಿಕಾರಿಗಳೇ ಸೈಬರ್ ವಂಚನೆಗೊಳಗಾಗಿ ಹಣ ಕಳೆದುಕೊಂಡಿದ್ದಾರೆ. ಯಾರದೋ ಹೆಸರಿನಲ್ಲಿ ಫೇಸ್‌ಬುಕ್ ಖಾತೆಗಳನ್ನು ಸೃಷ್ಟಿಸಿ ಅವರ ಗೆಳೆಯರ ಗುಂಪಿನಿಂದ ಹಣ ಪೀಕುವ ಆಸಾಮಿಗಳೂ ಇದ್ದಾರೆ.

ಸೈಬರ್ ವಂಚಕರು ಹಾಗೂ ವಂಚನೆಗೆ ಒಳಗಾದವರ ವಯೋಮಾನವನ್ನು ಗಮನಿಸಿದರೆ, ಅವರಲ್ಲಿ ತರುಣ ತರುಣಿಯರೇ ಹೆಚ್ಚು. ಹಿರಿಯ ನಾಗರಿಕರು ತಂತ್ರಜ್ಞಾನದ ಮರೆಮೋಸಗಳನ್ನು ಅರಿಯದೆ ಮೋಸಕ್ಕೊಳಗಾದರೆ, ಯುವಜನ ತಮಗೆ ತಿಳಿದ ದಾರಿಯಲ್ಲಿಯೇ ನಡೆಯುತ್ತ ದಿಕ್ಕುತಪ್ಪುತ್ತಿರುವುದಿದೆ. ವಂಚನೆಗೆ ಒಳಗಾಗುವ ಬಹುತೇಕರು ವಿದ್ಯಾವಂತರೆನ್ನುವುದೂ ವಿಶೇಷವೇ. ಸೈಬರ್ ಜಗತ್ತಿನೊಂದಿಗೆ ಒಡನಾಟ ಹೊಂದಿದ್ದೂ ವಂಚನೆಯ ಸಾಧ್ಯತೆಗಳ ಅರಿವಿದ್ದೂ ಹಳ್ಳಕ್ಕೆ ಬೀಳುವ ಕೆಲವು ಪ್ರಕರಣಗಳಲ್ಲಿ ಅರಿವಿನ ಕೊರತೆಯಷ್ಟೇ ಇರುವುದಿಲ್ಲ; ಸುಲಭವಾಗಿ ದೊರೆಯಬಹುದಾದ ಲಾಭವನ್ನು ತಮ್ಮದಾಗಿಸಿಕೊಳ್ಳುವ ಆಸೆಬುರುಕತನದ ಪಾಲೂ ಇರುವ ಸಾಧ್ಯತೆಯಿದೆ. ಹೆಚ್ಚಿನ ಬಡ್ಡಿಯ ಆಸೆ ತೋರಿಸುವ ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ವ್ಯವಹಾರ ಸುರಕ್ಷಿತವಲ್ಲ ಎನ್ನುವುದು ತಿಳಿದಿದ್ದರೂ ಹೂಡಿಕೆ ಮಾಡುವವರು ಇರುವಂತೆ, ಇರುಳು ಕಂಡ ಡಿಜಿಟಲ್ ಬಾವಿಗೆ ಹಗಲಿನಲ್ಲಿ ಬೀಳುವವರೂ ಇದ್ದಾರೆ.

ಐಷಾರಾಮ ಜೀವನಕ್ಕೆ ಮಾರುಹೋದವರಿಗೆ ಸುಲಭಕ್ಕೆ ಹಣ ಮಾಡುವ ದಾರಿಯಾಗಿ ಸೈಬರ್ ವೇದಿಕೆ ಕಾಣಿಸುತ್ತದೆ. ವಂಚನೆಯ ಪ್ರಕರಣಗಳಲ್ಲಿ ಅನೇಕರು ದೂರು ನೀಡುವ ಗೋಜಿಗೇ ಹೋಗುವುದಿಲ್ಲ ಎನ್ನುವುದೂ ವಂಚಕರ ಭಂಡಧೈರ್ಯಕ್ಕೆ ಒತ್ತಾಸೆಯಾಗಿದೆ. ಕೊರೊನಾ ಕಾಲಘಟ್ಟದಲ್ಲಂತೂ ಭೌತಿಕ ನಾಣ್ಯ–ನೋಟುಗಳ ಜಾಗದಲ್ಲಿ ಡಿಜಿಟಲ್ ಹಣದ ಚಲಾವಣೆ ಹೆಚ್ಚುತ್ತಿದೆ. ಈ ಡಿಜಿಟಲ್ ಹಣದ ಹರಿವು ಅಪಾಯಗಳಿಗೂ ಅವಕಾಶ ಕಲ್ಪಿಸುತ್ತಿದೆ.

ಸೈಬರ್ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ವ್ಯಾಪಕವಾಗಿ ನಡೆಯಬೇಕಾದುದು ಇಂದಿನ ಅಗತ್ಯ. ವಿದ್ಯಾರ್ಥಿಗಳಿಗೆ, ಯುವಜನರಿಗೆ ಹಾಗೂ ಹಿರಿಯ ನಾಗರಿಕರಿಗೆ ಸೈಬರ್ ಸುರಕ್ಷತೆಯ ಬಗ್ಗೆ ವ್ಯಾಪಕ ತಿಳಿವಳಿಕೆ ಮೂಡಿಸಬೇಕು. ವಿಶೇಷವಾಗಿ ಹೆಣ್ಣುಮಕ್ಕಳಿಗೆ ಡಿಜಿಟಲ್ ಕಿರಾತಕರ ಕಬಂಧ ಬಾಹುಗಳಿಗೆ ಸಿಲುಕದಂತೆ ಎಚ್ಚರಿಸಬೇಕು. ಅರಿವು ಮೂಡಿಸುವ ಕೆಲಸದ ಜೊತೆಜೊತೆಗೇ ಸೈಬರ್ ಕಾನೂನುಗಳನ್ನು ಸಶಕ್ತಗೊಳಿಸುವ ಹಾಗೂ ಸಿಕ್ಕಿಬಿದ್ದ ವಂಚಕರಿಗೆ ಕಠಿಣ ಶಿಕ್ಷೆ ದೊರಕಿಸುವ ಕೆಲಸವೂ ಆಗಬೇಕಿದೆ.

■ ರಘುನಾಥ ಚ.ಹ.



ಈಶ್ವರ್